

ಕೈ ಹಾಕಿ ಉಂಬುಕೆ ಕೂತರು. ಇವ್ರ್ ಹೊಟ್ಟಿ ತುಂಬಾ ಊಟ ಮಾಡ್ತಿದ್ದಾರೆ ಅಂತ ಹೊಟ್ಟೆಕಿಚ್ಚಾಯ್ತೋ ಏನೋ ಮಳೆ ಹೊಡ್ತ ತಕ್ಕಂಡು ಬಾರಿಸಿತು. ಮೇಲೆ ಗುಡುಗು ಮಿಂಚು. ಈಸೂರ ಒಂದು ದ್ವಾಸಿ, ಒಂದು ಕೋಳಿ ತುಂಡು ಹೊರಗೆ ಮಳೆಗೆ ಬಿಸಾಕಿದ. ಗುಡುಗು ಕೈದಾಯಿತು.

'ಅಬಾ ನಮ್ ಮನಿಯಂಗೆ ಹೀಂಗ್ ಅಡ್ಗಿ ಮಾಡುಕಾತಿಲ್ಯ?' ಬೇಡು ಕೇಂಡ. 'ಆತ್ತಪ. ಬರು ಸಲಿ ಬೇಡುಕ್ ಹ್ವಾಪದ್ ಬ್ಯಾಡ. ನಾವೇ ಆಸಾಡಿ ಹಬ್ಬ ಮಾಡ್ವ. ಅಬ್ಬಿ ಅಡ್ಗಿ ಮಾಡ್ತಳ್. ಈಗ ತೀನ್ ಮಗ' ಈಸೂರ ಮಗನನ್ನು ಊಟದ ಕಡೆಗೆ ದೂಡಿದ. 'ಅಲ್ಲ ಅಪ್ಪಯ್ಯ...' ಅಂತೇನೋ ಬಾಯಿ ತೆಗೆದ 'ಮಗಾ ಇಕಾಣ್ ಬಂಗ್ಡಿ ಹೋಳ್ ತಕೊ' ಎಂದು ಮಗನಿಗೆ ನೀಡಿದಳು. ಹೊಟ್ಟೆ ತುಂಬಾ ಉಂಡರು. ಇನ್ನೂ ಎರಡು ದಿನ ಉಂಬಷ್ಟು ಊಟ ಇತ್ತು. ಚಣ್ಕು ಮಡ್ಕಿಗೆಲ್ಲ ತುಂಬಿ ಕಾಯ್ಸಿದಳು. ಊರೊಳಗೆ ಹೋಯ್ಬಂದ ಮೇಲೆ ಮಗು ಮಂಕಾದ್ದು ಇಬ್ಬರಿಗೂ ಗೊತ್ತಾಯ್ತು. ಮನಿಕಂಡರು. ಆದರೆ ಮಳೆ ಮತ್ತು ಬೇಡು ಮನಿಕಣ್ಲಿಲ್ಲ.

'ಅಪ್ಪಯ್ಯ ನಾನ್ ಶಾಲಿಗ್ ಹ್ವಾಪುಕಾಗ್ದಾ?'

●